# ಪುರಾಣಗಳಲ್ಲಿ ಪ್ರತಿಬಿಂಬಿತವಾದ ಸಂಸ್ಕೃತಿ

**ಡಾ. ಪ್ರಸನ್ನಾಕ್ಷಿ ಕೆ.ಎಲ್.**

ಭಾರತೀಯ ಸಂಸ್ಕೃತಿಯ ಸಮಗ್ರ ರೂಪುರೇಖೆ ಕಾಣಿಸುವುದೇ ಅತಿವಿಸ್ತಾರವಗಿರುವ ಪುರಾಣಗಳಲ್ಲಿ. ಇದರ ಹೊಳಹನ್ನು ಇಲ್ಲಿ ನೀಡಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.



## ಪೀಠಿಕೆ

ಸಕಲ ಜೀವಿಗಳೂ ಸುಖವಾಗಿ ಆನಂದದಿಂದ ಬದುಕಬೇಕು, ಎಲ್ಲೆಲ್ಲೂ ಸುಖಶಾಂತಿ ನೆಮ್ಮದಿಗಳು ನೆಲೆಸಬೇಕು, ಹಾಗಾಗಲು ಜೀವಗಳು ತಮ್ಮ ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು? ಎಂದು ತಮ್ಮ ಹೃದಯಾಂತರಾಳದ ಧ್ಯಾನ ಸಮಾಧಿಯಲ್ಲಿ ಸನಾತನ ಋಷಿಗಳು ಕಂಡುಕೊಂಡರು. ಅದನ್ನೇ ಭಾಷೆಯ ಮೂಲಕ ವ್ಯಕ್ತಪಡಿಸಿದರು. ಅದು ಮೊದಲಿಗೆ ವ್ಯಕ್ತಗೊಂಡ ಸಾಹಿತ್ಯದ ಬಗೆಯನ್ನೇ 'ವೇದ' ಎನ್ನುವುದು. ಆ ವೇದದ ಭಾವವನ್ನೇ ಹಿಡಿದು, ಅದರದೇ ಮಾರ್ಗವನ್ನನುಸರಿಸಿ ಆಯಾ ಕಾಲದ ಜನರ ಮನೋಧರ್ಮಕ್ಕನುಗುಣವಾದ ಮಾರ್ಪಾಟುಗಳೊಡನೆ ಪ್ರಕಟಗೊಂಡ ಸಾಹಿತ್ಯವೇ ಪುರಾಣ.

## ಪುರಾಣದ ಲಕ್ಷಣ

**ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।**
**ವಂಶಾನುಚರಿತಂ ಚೇತಿ ಪುರಾಣಂ ಪಂಚಲಕ್ಷಣಮ್ ॥**

*(ಅಮರಕೋಶ ೧.೬.೧೬೧)*

೧) ಸೃಷ್ಟಿ ಅದರ ವಿಕಾಸ ೨) ಅದು ಲಯಗೊಳ್ಳುವ ಕ್ರಮ ೩) ಋಷಿಗಳ ರಾಜರ ದೇವತೆಗಳ ವಂಶಗಳ ಬೆಳವಣಿಗೆಯಾದ ಬಗೆ ೪) ಬ್ರಹ್ಮನಿಂದ ಪ್ರಕಟಗೊಂಡ ಸ್ವಾಯಂಭುವ ಮನುವಿನಿಂದ ಆರಂಭಿಸಿ ೧೪ ಮನುಗಳ ಚರಿತ್ರೆ, ಆಯಾ ಮನ್ವಂತರಗಳಲ್ಲಿ ಸಂಭವಿಸಿದ ವಿಶೇಷ ಘಟನೆಗಳ ವಿವರಣೆ ೫) ಮೇಲೆ ಹೇಳಿದ – ಋಷಿ ರಾಜ ದೇವತೆ – ಈ ವಂಶಗಳಲ್ಲಿ ಬಂದವರ ವಿಶೇಷ ಸಾಧನೆ, ಅವರ ಶಕ್ತಿ ಮಹಿಮೆ ಗುಣಾವಗುಣಗಳ ನಿರೂಪಣೆ, ಈ ಐದು ಅಂಶಗಳಿರುವ ಕೃತಿಯನ್ನು 'ಪುರಾಣ' ಎನ್ನುವರು ಎಂದು ಅಮರಕೋಶ ತಿಳಿಸುತ್ತದೆ.

ಭಾಗವತ ಇದರೊಡನೆ ಜಗತ್ತಿನ ನಾನಾ ವಿಧ ಚಟುವಟಿಕೆಗಳಿಗೆ ಪೂರಕವಾಗಿ ನಿರ್ಮಿತವಾದ ವ್ಯವಸ್ಥೆಗಳು, ಅವುಗಳ ರಕ್ಷಣೆಗಾಗಿ ಆದ ಅವತಾರಗಳು, ಇವುಗಳ ವಿವರಗಳನ್ನೂ ಪುರಾಣಗಳು ಒಳಗೊಳ್ಳುತ್ತವೆ ಎನ್ನುತ್ತದೆ. *(೧೨.೭.೯-೧೦)*, ಬ್ರಹ್ಮವೈವರ್ತ ಪುರಾಣ ಸೃಷ್ಟಿ, ಸ್ಥಿತಿ ಇವುಗಳ ಪಾಲನೆಯಲ್ಲಿ ಮಾನವ ತನ್ನ ಉಳಿವಿಗಾಗಿ ಆಯ್ದುಕೊಂಡ ಉದ್ಯೋಗ

ಪ್ರಲಯ ಮೋಕ್ಷ ವಿವಿಧ ದೇವತೆಗಳ ಹಾಗೂ ಹರಿಯ ನಾನಾ ವಿಧ ಲೀಲೆಗಳನ್ನು ವರ್ಣಿಸುವುದು ''ಪುರಾಣ'' ಎನ್ನುತ್ತದೆ.

'ಪುರಾ ಅತಿ ನವಂ ಪುರಾಣಂ'*(೩.೪.೨.೨೪)* ಎಂದು ನಿರುಕ್ತವು 'ಪುರಾಣ' ಪದಕ್ಕೆ ಅರ್ಥವನ್ನು ಹೇಳುತ್ತದೆ. ಅಂದರೆ ಪುರಾಣಗಳು ಹಳೆಯದಾದ ವೇದ ಪ್ರತಿಪಾದಿತವಾದ ವಿಷಯ ವನ್ನು ತತ್ಕಾಲೋಚಿತ ಉದಾಹರಣೆಗಳೊಡನೆ ಹೊಸರೂಪದಲ್ಲಿ ತಿಳಿಸುತ್ತದೆ ಎಂದರ್ಥ. ಅಂದರೆ, ಅದು ಎಂದೋ ಆಗಿ ಹೋದ ವಿಚಾರವನ್ನು ಹೇಳುತ್ತಿಲ್ಲ, ಬದಲಿಗೆ ಯಾವಾಗಲೂ ಇರುವ ಅಳಿಯದ ವಿಷಯವನ್ನು ಕಾಲಕ್ಕನುಗುಣವಾದ ರೀತಿ ಭಾಷೆ ಗಳಲ್ಲಿ ನಿರೂಪಿಸುತ್ತದೆ. ಸಂಸ್ಕೃತ ವ್ಯಾಕರಣಶಾಸ್ತ್ರಜ್ಞರಾದ ಪಾಣಿನಿ 'ಪುರಾಣಪ್ರೋಕ್ತೇಷು ಬ್ರಾಹ್ಮಣಕಲ್ಪೇಷು' ಎಂದು ತಮ್ಮ 'ಅಷ್ಟಾಧ್ಯಾಯಿ'ಯಲ್ಲಿ ಹೇಳಿದ್ದಾರೆ. ಅಂದರೆ ಬ್ರಾಹ್ಮಣಗಳು ಹೇಗೆ ವೇದ ಸಂಹಿತೆಯಲ್ಲಿ ಹೇಳಿರುವ ಯಜ್ಞಭಾಗಗಳನ್ನು ವಿವರಿಸುವುವೋ ಹಾಗೆಯೇ ಪುರಾಣಗಳು ವೇದ ತತ್ತ್ವಗಳ ವಿವರಣೆಗಾಗಿ ನಿರ್ಮಿತ ವಾಗಿವೆ-ಎಂದರ್ಥ. ಉದಾಗೆ: ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ'... *(ಋಗ್ವೇದ, ೧.೫.೨೨)* ಈ ಮಂತ್ರದ ಅರ್ಥ ನಮಗೆ ಪುರಾಣದ ವಾಮನಾವತಾರದ ಸಹಾಯದಿಂದ ಮಾತ್ರ ಆಗುವುದು. ಹಾಗಿಲ್ಲದೆ ಇದ್ದರೆ ಅದು ಕೇವಲ ಸೂರ್ಯನ ಅನುದಿನದ ಗತಿಯನ್ನು ಸೂಚಿಸುತ್ತದೆ ಎಂಬ ಅರ್ಥಕ್ಕಷ್ಟೇ ಸೀಮಿತವಾಗಬೇಕಾಗುತ್ತದೆ. ಅಂತೆಯೇ 'ನಮೋ ನೀಲಗ್ರೀವಾಯ' ...*(ಯಜು. ೧೬.೨೮.೩, ರುದ್ರಾಧ್ಯಾಯ)* ಮಂತ್ರವು ಪುರಾಣ ಗಳು ತಿಳಿಸುವ ನೀಲಿ ಕೊರಳಿನವನಾದ ಶಿವನು; ಇದು ಸಮುದ್ರ ಮಥನ ಪ್ರಸಂಗದ ಸಹಾಯವಿಲ್ಲದೆ ಅರ್ಥವಾಗುವುದಿಲ್ಲ.

### ಪುರಾಣಗಳ ಸಂಖ್ಯೆ

ಈ ಪುರಾಣಗಳು ಪ್ರಧಾನವಾಗಿ ೧೮ ಇವೆ. ಅವು ಮತ್ಸ್ಯ, ಮಾರ್ಕಂಡೇಯ, ಭಾಗವತ, ಭವಿಷ್ಯ, ಬ್ರಹ್ಮ, ಬ್ರಹ್ಮಾಂಡ, ಬ್ರಹ್ಮವೈವರ್ತ, ವಿಷ್ಣು, ವರಾಹ, ವಾಮನ, ವಾಯು, ಅಗ್ನಿ, ನಾರದ, ಪದ್ಮ, ಲಿಂಗ, ಗರುಡ, ಕೂರ್ಮ, ಸ್ಕಂದ ಪುರಾಣಗಳು. ಇದರೊಡನೆ ಕಾಲಿ, ವಿಷ್ಣುಧರ್ಮೋತ್ತರ, ನರಸಿಂಹ, ದೇವೀ ಭಾಗವತ ಇತ್ಯಾದಿ ಮತ್ತೆ ೧೮ ಪುರಾಣಗಳಿವೆ. ಜೊತೆಗೆ ಗಣೇಶೋಪ, ವಾಸಿಷ್ಠೋಪ, ಬೃಹನ್ನಾರಸಿಂಹ ಇತ್ಯಾದಿ ಉಪೋಪ ಪುರಾಣಗಳೂ ಹದಿನೆಂಟು ಸಂಖ್ಯೆಯಲ್ಲಿವೆ.

ಪುರಾಣಗಳು ಸೃಷ್ಟಿ ವಿಚಾರವನ್ನು ತಿಳಿಸುವಾಗ ಭೂಗೋಳಕ್ಕೂ ವಿಶೇಷವಾದ ಗಮನವನ್ನು ಕೊಡುತ್ತವೆ. ಭೂಗೋಳದಲ್ಲಿ ಅವು ಇತರ ದೇಶಗಳನ್ನು ವರ್ಣಿಸುವ ಸಂದರ್ಭದಲ್ಲಿ ಭಾರತ ದೇಶವನ್ನೂ ವರ್ಣಿಸುತ್ತವೆ. ಪುರಾಣಗಳು ಕಂಡ ಭಾರತ ಹೀಗಿದೆ:

### ಭಾರತದೇಶ

ಪ್ರಜೆಗಳನ್ನು ಪಾಲಿಸಿ ಪೋಷಿಸಿ ರಕ್ಷಿಸುವುದರಿಂದ (ಭೃ-ಭರಣೇ) ಭರತನೆಂದು ಹೆಸರು. ಆ ಮನುವಿನ ಆಳ್ವಿಕೆಯ ವ್ಯಾಪ್ತಿಯಲ್ಲಿರುವುದರಿಂದ ಇದನ್ನು 'ಭಾರತ' ದೇಶ ಎನ್ನುವರು. ಈ ದೇಶವನ್ನು ಬಿಟ್ಟರೆ ಉತ್ತಮ ಫಲದಾಯಕವಾದ ಕರ್ಮಾನುಷ್ಠಾನ ಯೋಗ್ಯ ಭೂಮಿ ಇನ್ನೊಂದಿಲ್ಲ ಎಂದು ಬ್ರಹ್ಮ ಪುರಾಣ ಹೇಳುತ್ತದೆ. ವಿಷ್ಣು ಪುರಾಣ-ಸಮುದ್ರ ಮತ್ತು ಹಿಮಾ



ಲಯಗಳ ನಡುವೆ ಇರುವ ಭೂಭಾಗ ಭಾರತ. ಇಲ್ಲಿ ಪ್ರಜೆಗಳು ಬೆಳಕನ್ನೇ ಬದುಕಾಗಿಸಿಕೊಂಡಿದ್ದಾರೆ. ಅದು ನಿತ್ಯವೂ ನಿರ್ವಿಕಲ್ಪವೂ ನಿರವಯವವೂ ನಿಷ್ಪ್ರಪಂಚವೂ ಆದ ಜ್ಞಾನಜ್ಯೋತಿ. ಅವರು ಅದನ್ನು ಪ್ರೀತಿಸುತ್ತಾರೆ. ಅದನ್ನು ಕೇಂದ್ರವಾಗಿಟ್ಟು ಕೊಂಡು ಅದರ ಆದರ್ಶದಲ್ಲೇ ಜೀವನ ನಡೆಸುತ್ತಾರೆ. ಆದುದ ರಿಂದ ಈ ಭೂಮಿ ಸ್ವರ್ಗ ಮೋಕ್ಷಗಳನ್ನು ಪಡೆಯುವ ಮಾರ್ಗ ವನ್ನು ತೋರಿಸುವ ಕರ್ಮಭೂಮಿ. ಇಲ್ಲಿ ಜನ್ಮ ತಳೆದವರೇ ಧನ್ಯರು. ಸ್ವರ್ಗದಲ್ಲಿ ದೇವತೆಗಳಾಗಿ ಹುಟ್ಟುವುದಕ್ಕಿಂತ ಭಾರತ ದಲ್ಲಿ ಪ್ರಜೆಗಳಾಗಿ ಹುಟ್ಟುವುದೇ ಉತ್ತಮ ಎಂದು ದೇವತೆಗಳು ಸ್ವರ್ಗಲೋಕದಲ್ಲಿ ಈ ದೇಶದ ಮಹಿಮೆಯನ್ನು ಕೊಂಡಾಡು ತ್ತಾರೆ — ಎನ್ನುತ್ತದೆ. ಅಗ್ನಿಪುರಾಣ-ಭಾರತವು ಕರ್ಮಭೂಮಿ ಯಾದುದರಿಂದ ಶ್ರೇಷ್ಠವಾದುದು. ಇತರ ಬೇರೆ ಭೂಭಾಗಗ ಳೆಲ್ಲವೂ ಭೋಗಭೂಮಿಗಳಾಗಿವೆ ಎಂದು ಹೇಳುತ್ತಾ ಭಾ, ರ, ತ ಎಂಬ ಮೂರು ಅಕ್ಷರಗಳ ಮಹತ್ವವನ್ನು ಹೀಗೆ ಹೇಳುತ್ತದೆ:

**ಭಾತಿ ಸರ್ವೇಷು ವೇದೇಷು ರತಿಃ ಸರ್ವೇಷು ಜಂತುಷು।**
**ತರಣಂ ಸರ್ವತೀರ್ಥಾನಾಂ ತೇನ ಭಾರತ ಮುಚ್ಯತೇ॥**

ಎಲ್ಲಾ ವೇದಗಳ ಜ್ಞಾನದ ಬೆಳಕಿನಿಂದ ಬೆಳಗುತ್ತವೆ. ಆ ಕಾರಣದಿಂದಲೇ ಎಲ್ಲಾ ಜೀವಕೋಟಿಗಳನ್ನು ಸಮನಾಗಿ ಪ್ರೀತಿಸು ತ್ತದೆ. ಇಲ್ಲಿನ ಯಾವ ತೀರ್ಥದಲ್ಲೇ ಮುಳುಗಿದರೂ ಮುಕ್ತಿ ಸಿದ್ಧ ಅಂತಹ ಪರಮಮಂಗಳ ತೀರ್ಥಗಳಿಂದ ಕೂಡಿದೆ. ಆದುದ ರಿಂದ ಇದು ಭಾರತ. ಭಾರತದೇಶದ ಸಾವಿರಾರು ನದಿ ಪರ್ವತ ಅರಣ್ಯ ತೀರ್ಥಕ್ಷೇತ್ರಗಳು ಹಾಗೂ ಆಯಾ ಸ್ಥಾನಗಳ ಮಹಿಮೆ

ವೈಶಿಷ್ಟ್ಯ ಇತ್ಯಾದಿ ಎಲ್ಲಾ ಅಂಶಗಳನ್ನು ಪುರಾಣಗಳು ವಿವರಿಸುತ್ತವೆ. ತನ್ಮೂಲಕ ಅವು ರಾಷ್ಟ್ರಪ್ರಜ್ಞೆಗೂ ದೇಶದ ಅಖಂಡತೆಯ ಭಾವಕ್ಕೂ ಪುಷ್ಟಿ ಕೊಡುತ್ತವೆ.

### ಸಂಸ್ಕೃತಿ

ಪ್ರಜೆಗಳು ಇಲ್ಲಿ ಪುಣ್ಯ ಕರ್ಮ ಅನುಷ್ಠಾನದಿಂದ ಪವಿತ್ರಾತ್ಮರಾಗಿರಲಿ, ಸದಾ ಸದಾಚಾರಸಂಪನ್ನರಾಗಿಯೇ ಇರಲಿ, ಕಾಲದ ವೇಗದ ಪ್ರಭಾವಕ್ಕೊಳಗಾಗಿ ತಮ್ಮ ಔನ್ನತ್ಯದಿಂದ ಕೆಳಗಿಳಿಯದೇ ಇರಲಿ ಎಂಬ ಭಾವನೆಯಿಂದ ಅವರ ದೈನಂದಿನ ವ್ಯವಹಾರ ಜೀವನದ ಧ್ಯೇಯೋದ್ದೇಶ ಇತ್ಯಾದಿ ಎಲ್ಲವೂ ಒಂದು ಚೌಕಟ್ಟಿನ ಮಿತಿಯೊಳಗೇ ಇರುವಂತೆ ನೋಡಿಕೊಳ್ಳುತ್ತವೆ, ವೇದ ವೇದಾಂಗದ ಬೆಳಕಿನಲ್ಲೇ ವಿಸ್ತಾರಗೊಂಡ ಈ ಪುರಾಣಗಳು. ಇಂತಹ, ವ್ಯಕ್ತಿಯು ಉತ್ಕರ್ಷದೆಡೆಗೆ ಹೋಗಲು ಸಹಾಯಕವಾಗುವಂತೆ ಕ್ರಿಯೆಗೆ 'ಸಂಸ್ಕಾರ' ಎನ್ನುವರು, ಅಂತಹ ಸಂಸ್ಕಾರವುಳ್ಳದ್ದು ಸಂಸ್ಕೃತಿ. ಹಾಗಾಗಿ ಸಂಸ್ಕೃತಿ ವ್ಯಕ್ತಿ ಹಾಗೂ ಸಮಾಜದ ಸರ್ವತೋಮುಖ ಚಟುವಟಿಕೆಯ ಪ್ರತೀಕವಾಗಿರುತ್ತದೆ. ವರ್ಣಾಶ್ರಮ ಧರ್ಮ ನೀತಿ ವ್ರತ ಹಬ್ಬ ಪೂಜೆ ವಿದ್ಯಾಭ್ಯಾಸ ಮುಂತಾದವು ಈ ಸಂಸ್ಕೃತಿಯ ಅಂಗಗಳಾಗಿರುತ್ತವೆ. ಈ ಅಂಶಗಳು ಪುರಾಣಗಳಲ್ಲಿ ಹೇಗೆ ಬಿಂಬಿತವಾಗಿದೆ ಎಂಬುದರ ಕುರಿತು ಇಲ್ಲಿ ಒಂದು ಸಣ್ಣ ಅವಲೋಕನವನ್ನು ಮಾಡುವ ಪ್ರಯತ್ನ ಮಾಡೋಣ.

### ಧರ್ಮ

ಸಂಸ್ಕೃತಿಯ ಮೂಲ ಬೇರು, ಧರ್ಮ. ಇಡೀ ಪ್ರಪಂಚದ, ಸಕಲ ಜೀವಿಗಳ ಉಳಿವಿಗೆ, ರಕ್ಷಣೆ ಪ್ರಗತಿ ಹಾಗೂ ಕ್ಷೇಮಕ್ಕೆ ಅಗತ್ಯವಾದ ಚಿಂತನೆಯನ್ನೂ ಅನುಷ್ಠಾನವನ್ನೂ ಧರ್ಮವು ಒಳಗೊಳ್ಳುವುದು. ಮರಣದ ನಂತರದಲ್ಲೂ ದೇಹದಲ್ಲಿದ್ದ ಜೀವಾತ್ಮದೊಡನೆಯ ಸಂಬಂಧವನ್ನು ಕಳಚಿಕೊಳ್ಳದೆ, ಆ ಜೀವಾತ್ಮದ ಕ್ಷೇಮಾಭಿವೃದ್ಧಿಗೆ ಶ್ರೇಯಸ್ಸಿಗೆ ಅದು ತನ್ನ ಮೂಲನೆಲೆಯನ್ನು ಸೇರಲು ಸಹಕಾರಿಯಾಗಿರುವುದು ಧರ್ಮ. ಪರಿಪೂರ್ಣತೆಯ ನೆಲೆ, ಆನಂದದ ನೆಲೆ, ಈ ಧರ್ಮ.

ಅಹಿಂಸೆ ಕ್ಷಮೆ ಸತ್ಯ ಶಮ ದಮ ದಯೆ ದಾನ ಶೌಚ ತಪಸ್ಸು — ಇವು ಮಾನವನು ಪಾಲಿಸಬೇಕಾದ ಸಾಧಾರಣಧರ್ಮಗಳೆಂದು ಪುರಾಣಗಳು ಅವನಿಗೆ ವಿಧಿಸುತ್ತವೆ. ಕೆಲವು ಪುರಾಣಗಳು ಧೃತಿ ಅಕ್ರೋಧ ಎಂಬ ಎರಡು ಧರ್ಮಗಳನ್ನು ಇವುಗಳೊಡನೆ ಸೇರಿಸಿದರೆ, ಮತ್ತೆ ಕೆಲವು ಈ ಎರಡನ್ನೂ ಕ್ಷಮಾಗುಣದ ಅಂಗವಾಗಿ ಹೇಳುತ್ತವೆ. ತ್ಯಾಗ ಮತ್ತು ದಾನ ಎರಡೂ ಒಂದನ್ನೊಂದು ಬೆಸೆದುಕೊಂಡಿರುವ ಧರ್ಮಗಳು, ಅಸ್ತೇಯ ಆರ್ಜವಗಳು ಸತ್ಯದ ರೂಪಾಂತರ, ವಿದ್ಯೆ ಜ್ಞಾನ ಎರಡೂ ಒಂದೇ ನಾಣ್ಯದ ಎರಡುಮುಖಗಳು — ಎಂದು ಕೆಲವು ಪುರಾಣಗಳು ಹೇಳುತ್ತವೆ. ಈ ಎಲ್ಲಾ ಧರ್ಮಗಳನ್ನು ಅನುಷ್ಠಾನಕ್ಕೆ ತರಲು ಮಾನವನು ಆಶ್ರಮಧರ್ಮಗಳನ್ನು ಪಾಲಿಸಲೇಬೇಕೆಂದು ಎಲ್ಲ ಪುರಾಣಗಳೂ ಪ್ರತಿಪಾದಿಸುತ್ತವೆ. ಪುರಾಣಗಳು ಏಕಕಂಠದಿಂದ ಘೋಷಿಸುವ ಈ ವರ್ಣಾಶ್ರಮ ಧರ್ಮಗಳು ಸಮಾಜದ ದಕ್ಷತೆ ಕ್ಷೇಮ ಸುಗಮ ಕಾರ್ಯನಿರ್ವಹಣೆ ಭೌತಿಕ ಹಾಗೂ ಆಧ್ಯಾತ್ಮಿಕ ಪರಿ ಪೂರ್ಣತೆ ಇವುಗಳಿಗೆ ಅತ್ಯಗತ್ಯವಾದವು .

### ವರ್ಣಾಶ್ರಮ ಧರ್ಮಗಳು

ಸಮಾಜದ ಸೌಹಾರ್ದ ಸಾಮರಸ್ಯ ನೆಮ್ಮದಿ ಸರ್ವತೋಮುಖ ಅಭಿವೃದ್ಧಿ ಈ ಯೋಜನೆಯ ಉದ್ದೇಶ. ಪ್ರತಿಯೊಂದು ವರ್ಗದವರೂ ನಿಯಮಾನುಸಾರವಾಗಿ ಮತ್ತೊಂದು ವರ್ಗದವರ ಕಾರ್ಯಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡದೆ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಅತ್ಯಂತ ದಕ್ಷತೆಯಿಂದ ನಿರ್ವಹಣೆ ಮಾಡಬೇಕು. ಪ್ರತಿಯೊಬ್ಬನು ತನ್ನ ತನ್ನ ಪಾಲಿನ ಕರ್ತವ್ಯವನ್ನು



ಸ್ವ ಇಚ್ಛೆಯಿಂದ ಪ್ರೀತಿಯಿಂದ ಆದರದಿಂದ ಪಾಲಿಸಿಕೊಂಡು ಹೋಗಬೇಕು. ಅದೇ ಅವರಿಗೆ ಸರ್ವಸಿದ್ಧಿಪ್ರದವಾಗುತ್ತದೆ, ಕೊನೆಗೆ ಅದು ಮೋಕ್ಷಸಾಧಕವೂ ಆಗುತ್ತದೆ. ಅದು ಎಲ್ಲಾ ಪುರುಷಾರ್ಥಗಳನ್ನು ಕರುಣಿಸುತ್ತದೆ. ತಮ್ಮ ತಮ್ಮ ಪಾಲಿನ ಕೆಲಸಗಳನ್ನು ಪೂಜೆಯಾಗಿ ಭಾವಿಸಿ ಶ್ರದ್ಧೆ, ನಿಷ್ಠೆ, ಪ್ರೇಮಗಳಿಂದ ಅದನ್ನು ನೆರವೇರಿಸಿದರೆ ಅದೇ ಪರಮಾತ್ಮನನ್ನು ತೃಪ್ತಿಪಡಿಸುವ ಬಗೆಯೂ ಆಗುವುದು. ಅದೇ ದೇವರ ಪರಮಪೂಜೆಯಂತಾಗುವುದು. ಏಕೆಂದರೆ ಅವನು ಎಲ್ಲಾ ಜೀವಿಗಳಲ್ಲಿ ಎಲ್ಲೆಲ್ಲೂ ಎಲ್ಲದರಲ್ಲೂ ಆದ್ಯಂತವಾಗಿ ತುಂಬಿಕೊಂಡಿರುವನು.

ಎಲ್ಲಾ ವರ್ಣಗಳೂ ಸಮಾಜ ಎಂಬ ಯಂತ್ರದ ಬಿಡಿಭಾಗಗಳು. ಅದರಲ್ಲಿ ಪ್ರತಿಯೊಂದು ಭಾಗವೂ ಮುಖ್ಯವೇ. ಹಾಗಾಗಿ ಈ ಎಲ್ಲವೂ ಇಡೀ ಸಮಾಜದ ನೆಮ್ಮದಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಸ್ಪರ ಎಲ್ಲಾ ವರ್ಗದವರ ಹಿತಕ್ಕಾಗಿ ಕಾರ್ಯನಿರತವಾಗಬೇಕೆಂದು ಪುರಾಣಗಳು ಆಜ್ಞಾಪಿಸುತ್ತವೆ. ಆತ್ಮಜ್ಞಾನವನ್ನು ವಿಶ್ವಮೈತ್ರಿಯನ್ನೂ ಸರ್ವಸಮಭಾವವನ್ನು ರಕ್ಷಿಸುವವನು ಬ್ರಾಹ್ಮಣ. ಸರ್ವರ ಶಾರೀರಿಕ ಸುಖಸೌಲಭ್ಯಗಳ ರಕ್ಷಕ ಕ್ಷತ್ರಿಯ.

ಸಮಾಜದ ಆರ್ಥಿಕ ಸುಭದ್ರತೆಯ ಪಾಲಕ ವೈಶ್ಯ. ಯಾಂತ್ರಿಕ ಹಾಗೂ ಲಲಿತಕಲೆಗಳ ರಕ್ಷಕ, ಪೋಷಕ ಶೂದ್ರ ಎಂದು ಅವು ತಿಳಿಸುತ್ತವೆ, ಇಲ್ಲಿ ವರ್ಣದಿಂದ ಕೆಲಸವಲ್ಲ, ಇಂತಹ ಕೆಲಸದಲ್ಲಿ ಆಸಕ್ತಿ ಪ್ರೀತಿ ಉತ್ಸಾಹಗಳನ್ನು ಹೊಂದಿರುವವನು ಇಂತಹ ವರ್ಣ ಎಂದೂ ಅವು ತಿಳಿಸುತ್ತವೆ. ಹಾಗಾಗಿ ಅವನವನ ಮೇಲೆ ಹೇಳಿದ ಕೆಲಸಗಳ ಮೇಲಿನ ಶ್ರದ್ಧೆ ಪ್ರೀತಿ ಆಸಕ್ತಿಗನುಗುಣವಾಗಿ ಅವನು ವರ್ಣವನ್ನು ಹೊಂದಲು ಸ್ವತಂತ್ರ. ವ್ಯಕ್ತಿ ಯಾವುದೇ ವರ್ಣಕ್ಕೆ ಸೇರಿದವನಾಗಿರಲಿ ಪ್ರತಿಯೊಬ್ಬನೂ ಭೂತದಯೆ, ಸಹನೆ, ವಿನಯ, ಪ್ರಾಮಾಣಿಕತೆ, ಶೌಚ, ಅಹಿಂಸೆ, ಸ್ನೇಹ, ದ್ವೇಷ ಮತ್ತು ಲೋಭ ರಾಹಿತ್ಯ ಇವುಗಳನ್ನು ಬೆಳೆಸಿಕೊಳ್ಳಬೇಕೆಂದು ಪುರಾಣಗಳು ಒತ್ತಿ ಹೇಳುತ್ತವೆ. ಪ್ರತಿಯೊಂದು ವರ್ಣದವರೂ ಸಮಾಜದ ಅಂಗ ವಾಗಿರುವುದರಿಂದ ಸಮಾಜದ ಗರಿಷ್ಠ ಪ್ರಗತಿ, ಸಾಮರಸ್ಯ, ಕ್ಷೇಮಾಭಿವೃದ್ಧಿಗಾಗಿ ಅವರು ತಮ್ಮ ನಿರ್ದಿಷ್ಟವಾದ ಕರ್ತವ್ಯ ಗಳನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಮಾಡಬೇಕು. ಇದು ಪುರಾಣ ಪ್ರತಿಪಾದಿತ ವರ್ಣಧರ್ಮದ ನೀತಿ.

ಪುರಾಣಗಳಲ್ಲಿ ಹೇಳಿರುವ ಕ್ಷತ್ರಿಯನ (ರಾಜನ) ಕರ್ತವ್ಯ ಗಳು ಹೆಚ್ಚು ಕಡಿಮೆ ಒಂದೇ ಆಗಿವೆ. ಕಲಿತನ, ಹುರುಪು, ಧೈರ್ಯ, ಕೌಶಲ, ಪ್ರಭುತ್ವ, ರಣಸ್ಥೈರ್ಯ, ಶಿಷ್ಟರಕ್ಷಣ-ದುಷ್ಟ ಶಿಕ್ಷಣ, ಶಸ್ತ್ರನಿಯಂತ್ರಣ, ಭೂರಕ್ಷಣಾಕಾರ್ಯ — ಇವು ಅವ ನಿಗೆ ಅವು ವಿಧಿಸುವ ಕರ್ತವ್ಯಗಳು. ರಾಜನಾದವನು ಯೋಗ್ಯ ರೀತಿಯಲ್ಲಿ ಗಳಿಸಬೇಕು, ಗಳಿಸಿದ್ದನ್ನು ಯೋಗ್ಯರೀತಿಯಲ್ಲಿ ವಿನಿ ಯೋಗಿಸಬೇಕು. ತನ್ನ ವೈಯಕ್ತಿಕ ಆಸೆಗಳ ಸಾಧನೆಗೆ ದುರ್ಬಲ ರನ್ನು ತುಳಿಯಬಾರದು. ಹಾಗೆ ಮಾಡಿದರೆ ಅವನು ದೈವೀ ಪ್ರಕೋಪಕ್ಕೆ ಗುರಿಯಾಗುತ್ತಾನೆ ಎಂದು ಪುರಾಣಗಳು ಅದರಲ್ಲಿ ವಿಶೇಷವಾಗಿ ಅಗ್ನಿಪುರಾಣ ಅವನನ್ನು ಕರ್ತವ್ಯವಿಮುಖತೆಯಿಂದ ಎಚ್ಚರಿಸು ತ್ತದೆ. ಅವನು ಸ್ವತಃ ಆತ್ಮಸಂಯಮಿಯಾಗಿಲ್ಲದಿದ್ದರೆ ಪ್ರಜೆಗಳನ್ನು ಅವನು ಹೇಗೆ ತಾನೆ ನಿಯಂತ್ರಿಸುವನು! ಅವನು ಪ್ರಜೆಗಳ ಪ್ರೀತಿ ಗಳಿಸುವ ಕೆಲಸ ಮಾಡಬೇಕು. ಅವರಿಗೆ ತೊಂದರೆ ಯಾಗುವ ಕೆಲಸ ಮಾಡಬಾರದು ಎಂದು ಅವು ತಿಳಿಸುತ್ತವೆ.

## ಆಶ್ರಮಗಳು

ಬ್ರಹ್ಮಚಾರಿಯಾದವನು ದೈಹಿಕ ಭೋಗಗಳೆಡೆಗೆ ಗಮನ ಹರಿಸ ಬಾರದು. ಅಧ್ಯಯನ, ಗುರುಸೇವೆ ಇವು ಇವನ ಈ ಕಾಲದ ಜೀವನದ ಪರಮಧ್ಯೇಯ. ಸರಳತೆ, ಚುರುಕುತನ, ಸೌಮ್ಯತೆ, ಸಹಿಷ್ಣುತೆ ಮುಂತಾದ ಉದಾತ್ತ ಗುಣಗಳನ್ನು ಗುರುಕುಲವಾಸ ದಲ್ಲಿ ಬ್ರಹ್ಮಚಾರಿಯಾದವನು ಬೆಳೆಸಿಕೊಳ್ಳಬೇಕು. ಅದು ಅವನ ಮುಂದಿನ ಆಶ್ರಮದ ಜೀವನ ಕಾಲದಲ್ಲಿ ಅವನು ಹೊರಬೇಕಾಗ ಬಹುದಾದ ಜವಾಬ್ದಾರಿಗಳನ್ನು ಸುಸೂತ್ರವಾಗಿ ಹೊರುವ ಶಕ್ತಿ ಯನ್ನು ಕೊಡುತ್ತದೆ. ಈ ಕಾಲದಲ್ಲಿ ಅವನು ಗುರುಕುಲದಲ್ಲಿ ಅಧ್ಯಯನ ಮಾಡಬಹುದಾದ ವಿದ್ಯೆಗಳ ಪಟ್ಟಿಯನ್ನೇ ಪುರಾಣ ಗಳು ಕೊಡುತ್ತವೆ. ಅವರವರ ಆಸಕ್ತಿ ಅಗತ್ಯಗಳನ್ನನುಸರಿಸಿ ಅವರು ಬೇಕುಬೇಕಾದ ವಿದ್ಯೆಯನ್ನು-ವಿದ್ಯೆಗಳನ್ನು ಕಲಿಯಬಹುದು.

## ವಿದ್ಯೆ

ಗುರುಕುಲದಲ್ಲಿ ಬ್ರಹ್ಮಚಾರಿಯು ಕಲಿಯಬೇಕಾದ ವಿಷಯ ಗಳಲ್ಲಿ ಸಾಮಾನ್ಯ ಮಾನವನ ಜೀವಿಕೆಗೆ ಅಗತ್ಯವಾದ ಎಲ್ಲಾ ವಿದ್ಯೆ ಗಳು ಜೊತೆಗೆ ವೇದವೇದಾಂಗ ಆಧ್ಯಾತ್ಮಿಕ ವಿಷಯಗಳು ಪ್ರಥಮ ಆದ್ಯತೆಯಲ್ಲಿರುತ್ತವೆ. ಅವನ್ನು ಬಿಟ್ಟು ಗುರುಕುಲದಲ್ಲಿ ವಿದ್ಯಾರ್ಥಿ ಯಾದವನು ಕಲಿಯಬಹುದಾದ ವಿದ್ಯೆಗಳ ದೊಡ್ಡ ಪಟ್ಟಿಯನ್ನೇ ಪುರಾಣಗಳು ನೀಡುತ್ತವೆ. ಅಗ್ನಿಪುರಾಣ : ವೃಕ್ಷಾಯುರ್ವೇದ, ಸಿದ್ಧೌಷಧ ವಿಷಹಾರಿ ಔಷಧ ಅಶ್ವಚಿಕಿತ್ಸಾ ಅಶ್ವಶಾಂತಿ ಗಜಶಾಂತಿ ಇತ್ಯಾದಿ ವಿಷಯಗಳನ್ನು ಪಟ್ಟಿ ಮಾಡುತ್ತದೆ. ಮರಗಳ ವಿಷಯ



ಅವುಗಳ ರಕ್ಷಣೆಗೆ ಗಮನಿಸಬೇಕಾದ ಅಂಶಗಳು, ಗಿಡ ಮರಗಳಿಗೆ ತಗಲಬಹುದಾದ ರೋಗಗಳು ಅವುಗಳಿಗೆ ಮಾಡಬೇಕಾದ ಚಿಕಿತ್ಸಾ ಕ್ರಮ, ಅಂತೆಯೇ ಯೋಗ್ಯ ಹಾಗು ಉತ್ತಮವಾದ ಕುದುರೆ ಆನೆಗಳ ಗುಣ ಲಕ್ಷಣಗಳು, ಅವುಗಳಿಗೆ ತಗಲುವ ರೋಗ ಚಿಕಿತ್ಸಾ ಕ್ರಮ, ಇತ್ಯಾದಿ ಎಲ್ಲಾ ಮಾಹಿತಿಯನ್ನು ಅದು ಕೊಡುತ್ತದೆ ಎಂಬುದು ವಿಶೇಷ ಗಮನಾರ್ಹ ಅಂಶ.

ಇದು ಕಾವ್ಯ, ನಾಟಕ ಮುಂತಾದ ಸಾಹಿತ್ಯ ಬಗೆಗಳನ್ನು ಅದರ ವಿವಿಧ ಪ್ರಭೇದಗಳನ್ನು ಉಪಯೋಗಿಸುವ ಅಲಂಕಾರ ರಸ ಮುಂತಾದ ಕಾವ್ಯ ಸೌಂದರ್ಯವರ್ಧಕಗಳ ವಿಷಯವನ್ನು ಸಾಕಷ್ಟು ವಿಸ್ತಾರವಾಗಿ ತಿಳಿಸಿಕೊಡುವುದು.

ನಾರದೀಯ ಪುರಾಣ, ವಾಯುಪುರಾಣಗಳು ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ನೀಡುತ್ತವೆ. ಸ್ವರಗಳ ಉತ್ಪತ್ತಿ ರಾಗ ತಾನ ಗ್ರಾಮ ಮೂರ್ಛನಾ ಮೊದಲಾದ ಪರಿಕರಗಳನ್ನೂ, ರಾಗ ಪ್ರಕಾರಗಳನ್ನೂ, ಗಾಯಕರ ದೋಷಗಳನ್ನೂ, ರಾಗದ ಶಕ್ತಿ ಪೂರ್ಣ ಅಲಂಕಾರ ಪ್ರಸನ್ನ ಮೊದಲಾದ ಹತ್ತು ಗುಣಗಳನ್ನೂ ಇವು ವಿವರಿಸುತ್ತವೆ. ವಾದ್ಯ ವೈವಿಧ್ಯಗಳು ಅವುಗಳನ್ನು ತಯಾರಿಸುವ ವಿಧಿವಿಧಾನಗಳನ್ನು ತಿಳಿಸುತ್ತವೆ. ನಾರದೀಯ ಪುರಾಣ ಛಂದಶ್ಶಾಸ್ತ್ರ ನಿರುಕ್ತ ಮುಂತಾದವುಗಳ ಲಕ್ಷಣಗಳನ್ನು ಮತ್ತು ಗುರು ಮತ್ತು ಶಿಷ್ಯ

ರಲ್ಲಿರಬೇಕಾದ ಲಕ್ಷಣಗಳನ್ನು ತಿಳಿಸುತ್ತದೆ.

## ಗೃಹಸ್ಥ

ಗೃಹಸ್ಥನ ಸ್ಥಾನವನ್ನು ಎಲ್ಲಾ ಪುರಾಣಗಳೂ ಮುಕ್ತಕಂಠದಿಂದ ಕೊಂಡಾಡುತ್ತವೆ. ಸಮಾಜದ ಸರ್ವರ ಹಿತಚಿಂತನೆಯಲ್ಲಿ ಇವನ ಪಾತ್ರ ಮತ್ತು ಜವಾಬ್ದಾರಿ ಮಹೋನ್ನತವಾದುದು. ಇವನು ಎಲ್ಲರ ಆಶ್ರಯದಾತ ಹಾಗಾಗಿ ಪ್ರಪಂಚವನ್ನೇ ಅತ್ಯಂತ ಪ್ರೀತಿಯಿಂದ ಆದರಿಸಬೇಕು. ತಿರಸ್ಕಾರ ದುರಭಿಮಾನ ಅಹಂಕಾರ ಒರಟುತನ ಪ್ರಾಣಿಹಿಂಸೆಗಳನ್ನು ಅವನು ಸರ್ವಥಾ ಬಿಡಬೇಕು. ದೇವಯಜ್ಞ, ಋಷಿಯಜ್ಞ, ಪಿತೃಯಜ್ಞ, ನೃಯಜ್ಞ, ಭೂತಯಜ್ಞಗಳ ಪರಿಪಾಲನೆ ಈತನಿಗೇ ಮಿಸಲು, ಈ ಎಲ್ಲವನ್ನೂ ಅವನು ತಪ್ಪದೆ ನೆರವೇರಿಸಬೇಕು.

ಇವುಗಳಲ್ಲಿ ಪುರಾಣಗಳು ಪಿತೃಯಜ್ಞ-ಶ್ರಾದ್ಧಕ್ಕೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿವೆ. ಅದನ್ನು ನೆರವೇರಿಸಬೇಕಾದಾಗ ಗೃಹಸ್ಥನು ಅನುಸರಿಸಬೇಕಾದ ನಿಯಮಗಳನ್ನೂ ನಿಷೇಧಗಳನ್ನೂ ಅವು ಒತ್ತಿ ಹೇಳುತ್ತವೆ. ಈ ಯಜ್ಞದ ಆಚರಣೆ-ವ್ಯಕ್ತಿಗೆ ದೀರ್ಘಾಯುಸ್ಸು ಕುಟುಂಬದ ಸುಖಸಂಪತ್ತು ಸಮೃದ್ಧಿ, ಸತ್ಸಂತಾನ ಅಭಿವೃದ್ಧಿ, ಜ್ಞಾನ ಅಭಿವೃದ್ಧಿ ಇತ್ಯಾದಿಗಳ ಪ್ರಾಪ್ತಿಗೆ ಸಾಧಕ. ಹಾಗಾಗಿ ಕೌಟುಂಬಿಕ ಜೀವನದ ಸುಮುಖತೆಗೆ ಪಿತೃಯಜ್ಞದ ಆಚರಣೆಯ ಅನಿವಾರ್ಯತೆಯನ್ನು ಅವು ತಿಳಿಸುತ್ತವೆ. ಜೊತೆಗೆ ಅದನ್ನು ಆಚರಿಸದವನು ಹೊಂದುವ ಪಾಪಗಳನ್ನು ಅವು ಪಟ್ಟಿ ಮಾಡುತ್ತವೆ. ಆ ಮೂಲಕ ಗೃಹಸ್ಥನು ಈ ಕರ್ತವ್ಯವನ್ನು ಎಂದಿಗೂ ಯಾವ ಕಾರಣಕ್ಕೂ ಉಪೇಕ್ಷಿಸಬಾರದು. ಇದು ಪರಮಪುಣ್ಯ ಎಂದು ಅವನಿಗೆ ಮನವರಿಕೆ ಮಾಡಿಕೊಡುತ್ತವೆ. ಈ ಶ್ರಾದ್ಧರೂಪಯಜ್ಞವು ಕುಟುಂಬದ ಹಿರಿಯರಿಗೆ ಸಲ್ಲಿಸುವ ಕೃತಜ್ಞತಾ ಸೂಚಕವೂ, ಸಮಾಜದ್ದೇ ಒಂದು ಅಂಗವಾದ ಬಡವರೂ ಜ್ಞಾನಿಗಳೂ ಸಾಧಕರೂ ಆದವರ ಯೋಗಕ್ಷೇಮದ ನಿಮಿತ್ತ ಗೃಹಸ್ಥನು ನೀಡುವ ಆರ್ಥಿಕ ಸಹಾಯಹಸ್ತ ಸೂಚಕವೂ ಆಗಿದೆ ಎಂದೂ ಅವು ತಿಳಿಸುತ್ತವೆ.

ಅತಿಥಿ ಸತ್ಕಾರ, ಕಷ್ಟದಲ್ಲಿರುವವರನ್ನು ಸಂತೈಸುವುದು, ಸಮಾಜದ ಸಾಮರಸ್ಯ, ಹಿತರಕ್ಷಣೆ ಕಾಯುವುದರಲ್ಲಿ ಸಹಾಯಕವಾಗುವ, ಭೂತಯಜ್ಞವು ವಿಶ್ವಕುಟುಂಬದ ಭಾವವನ್ನು ಬೆಳೆಸುತ್ತದೆ.

ಎಲ್ಲಾ ಯಜ್ಞಗಳೂ ಸೃಷ್ಟಿಯೊಂದಿಗೇ ಬಂದಿದೆ. ಬ್ರಹ್ಮ ಎಲ್ಲವನ್ನೂ ಯಜ್ಞಕ್ಕಾಗಿಯೇ ಸೃಷ್ಟಿಸಿದ್ದಾನೆ. ಯಜ್ಞಭಾವದಿಂದ ಈ ಎಲ್ಲದರಲ್ಲಿರುವ ದೋಷಗಳೂ ದೂರವಾಗುತ್ತವೆ. ಈ ಯಜ್ಞಭಾವದಿಂದ ಪಶುಪಕ್ಷಿಗಳೂ ಧನಧಾನ್ಯಗಳೂ ಎಲ್ಲವೂ ಶುದ್ಧವಾಗುತ್ತವೆ, ಮತ್ತು ಅಮೃತವಾಗುತ್ತವೆ. ಇದನ್ನು ಹೊರತುಪಡಿಸಿ ಬೇರೆದಾರಿಯಿಲ್ಲ ಎಂದು ಪುರಾಣಗಳು ತಿಳಿಸುತ್ತವೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಇದೇ ಅಭಿಪ್ರಾಯವನ್ನು ಸೂಚಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. (‘ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ’ *(ಗೀತೆ, ೩.೧೩.)* ‘ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಮ್’. *(ಗೀತೆ, ೪.೩೧)* )

## ವಾನಪ್ರಸ್ಥ

ಸಂನ್ಯಾಸಜೀವನದ ಕಡೆಗೆ ವ್ಯಕ್ತಿ ಸಂಕ್ರಮಿಸುವ ಕಾಲವಿದು. ಸಂಪೂರ್ಣ ತ್ಯಾಗ, ಕಾಮಕ್ರೋಧಲೋಭಾದಿಗಳ ಮೇಲಿನ ಜಯ ಮುಂತಾದವನ್ನು ವ್ಯಕ್ತಿ ಎಷ್ಟು ಮಟ್ಟಿಗೆ ಸಾಧಿಸಿರುವನೆಂಬುದರ ಪರೀಕ್ಷೆಯ ಕಾಲ ಇದು; ಒಳಹೊಕ್ಕು ತನ್ನನ್ನು ತಾನು ವಿಶ್ಲೇಷಿಸಿಕೊಳ್ಳುವ ಕಾಲ. ಈವರೆಗಿನ ಜೀವನದಲ್ಲಿ ತಾನು ಮಾಡಿರುವ ಪಾಪಪುಣ್ಯಗಳನ್ನೆಲ್ಲಾ ಮರೆತು ಮುಂದಿನ ಒಳಿತನ್ನು ಸಾಧಿಸಿಕೊಳ್ಳಲು ತಾನು ಹಾಕಿಕೊಳ್ಳಬೇಕಾದ ಯೋಜನೆ ಅವುಗಳನ್ನು ಸಾಧಿಸುವ ಕ್ರಮ ಈ ಎಲ್ಲವನ್ನೂ ವ್ಯಕ್ತಿ ಈ ಅವಧಿಯಲ್ಲಿ ಚಿಂತಿಸಬೇಕು-ಎಂದು ಪುರಾಣಗಳು ನಿರ್ದೇಶಿಸುತ್ತವೆ.

## ಸಂನ್ಯಾಸ

ಈ ಸ್ಥಿತಿಯಲ್ಲಿ ವ್ಯಕ್ತಿ ನಿಧಾನವಾಗಿ ತನ್ನೆಲ್ಲಾ ಆಸೆ ಆಮಿಷಗಳನ್ನು ತ್ಯಾಗ ಮಾಡಬೇಕು. ಸುಖ-ದುಃಖ, ಲಾಭ-ನಷ್ಟ, ಜಯ-ಅಪಜಯ, ಕೀರ್ತಿ-ಅಪಕೀರ್ತಿ, ಮಾನ-ಅಪಮಾನ ಮೊದಲಾದ ದ್ವಂದ್ವಭಾವಗಳನ್ನು ಮೀರಿದ ನೆಲೆಯಲ್ಲಿ ಜೀವಿಸಲು ಪ್ರಯತ್ನಿಸಬೇಕು. ಶರೀರದಿಂದಾಗಲೀ ಮನಸ್ಸಿನಿಂದಾಗಲೀ ಮಾತಿನಿಂದಾಗಲೀ ಯಾರಿಗೂ ಯಾವ ರೀತಿಯಿಂದಲೂ ಹಿಂಸೆಯನ್ನು ಮಾಡಬಾರದು. ಮಾಡುವ ಯಾವ ಕೆಲಸದಲ್ಲೂ ಫಲಾಪೇಕ್ಷೆ ಇರಬಾರದು. ಎಲ್ಲಾ ವಿಧ ಶಾರೀರಿಕ ಸಂಬಂಧಗಳಿಂದ ಉಂಟಾದ ಮಮಕಾರ ಭಾವವನ್ನು ಕಳಚಿಕೊಳ್ಳಲು ಪ್ರಯತ್ನಿಸಬೇಕು. ಶಾಂತನಾಗಿ ಸಾಧ್ಯವಾದಷ್ಟೂ ಭಗವಂತನ ಸ್ವರೂಪ ಲೀಲಾಗುಣವಿಶೇಷಗಳನ್ನು ಮನನಮಾಡುತ್ತ ಮೌನದಲ್ಲಿರಬೇಕು. ಪವಿತ್ರ ಜೀವನವನ್ನು ನಡೆಸಬೇಕು. ಇದೇ ಮೊದಲಾದ ಅನೇಕ ನಿಯಮಗಳನ್ನು ಸಂನ್ಯಾಸಕಾಲದಲ್ಲಿ ಸಾಧಿಸಬೇಕೆಂದು ಪುರಾಣಗಳು ವಿಧಿಸುತ್ತದೆ.

## ಕರ್ಮ-ಪುನರ್ಜನ್ಮ

ಈ ಎಲ್ಲಾ ವರ್ಣ ಆಶ್ರಮ ಅವಸ್ಥೆಗಳಲ್ಲಿ ಜೀವಿ ಯಾವ ರೀತಿ ಕರ್ಮವನ್ನು ಮಾಡುವನೋ ಅಂತಹ ಫಲವನ್ನು ಅವನು ಹೊಂದುವನು. ಬಿತ್ತಿದಂತೆ ಬೆಳೆ. ಅದಕ್ಕೆ ತಕ್ಕ ಮುಂದಿನ ಜನ್ಮಗಳನ್ನು ಅವನು ಹೊಂದುತ್ತಾ ಸಾಗುವನು. ಪ್ರತಿಯೊಂದು ಅವಸ್ಥೆಯಲ್ಲೂ ತನ್ನ ತನ್ನ ಪಾಲಿನ ಕರ್ತವ್ಯಗಳನ್ನು ಲೋಪವಿಲ್ಲದೆ ಭಗವಂತನ ಪೂಜೆ ಎಂಬ ಭಾವದಿಂದ, ಯಜ್ಞಭಾವದಿಂದ ನಿರ್ವಹಿಸಲು ಅವನು ಸ್ವತಂತ್ರನಿದ್ದಾನೆ ಎಂಬ ವಿವೇಚನೆಯನ್ನು ಅವನು ಬೆಳೆಸಿಕೊಳ್ಳಬೇಕು. ಸಾರಾಸಾರ ಯುಕ್ತಾಯುಕ್ತ ವಿವೇಕದಿಂದ ಸತ್ಕರ್ಮಗಳನ್ನು ಮಾಡುವ ಪ್ರವೃತ್ತಿಯನ್ನು

ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು. ಈ ಕ್ರಮದಲ್ಲಿ ತನ್ನನ್ನು ತಾನು ಉತ್ತಮಗೊಳಿಸಿಕೊಳ್ಳುವ ವ್ಯಕ್ತಿಯ ಸ್ವಾತಂತ್ರ್ಯದ ಕುರಿತು ಪುರಾಣಗಳು ಮತ್ತೆ ಮತ್ತೆ ಹೇಳುತ್ತವೆ. ವ್ಯಕ್ತಿ, ಈಗ ಈ ನೆಲೆಯಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ತನ್ನ ಮುಂದಿನ ಬದುಕನ್ನು ಹಸನು ಮಾಡಿಕೊಳ್ಳಬೇಕು. ಅದಕ್ಕೆ ಅಗತ್ಯವಾದ ಅಹಿಂಸೆ ಸತ್ಯ ದಾನ ಮೊದಲಾದ ಸದ್ಗುಣಗಳನ್ನು ರೂಢಿಸಿಕೊಳ್ಳಬೇಕು ಎಂದು ಅವು ಕರೆಕೊಡುತ್ತವೆ.

### ಅಹಿಂಸೆ

ಪುರಾಣಗಳು ಅಹಿಂಸೆಯನ್ನು ಸರ್ವೋತ್ಕೃಷ್ಟ ಗುಣವೆಂದು ಕರೆದಿವೆ. ಇತರರಿಗೆ ಹಾನಿಯನ್ನುಂಟು ಮಾಡುವುದನ್ನು ತಡೆಯುವ ಕ್ಷಮೆ ದಯೆ, ಶೌಚ ಮತ್ತು ಸತ್ಯಗಳು ಅಹಿಂಸೆಯನ್ನು ಆಶ್ರಯಿಸಿಕೊಂಡಿವೆ. ಅತ್ಯಂತ ಚಿಕ್ಕ ಹೀನ ಕೀಟದಂತಹ ಜೀವಿಯಿಂದ ಹಿಡಿದು, ಜ್ಞಾನ ವಿದ್ಯೆ ನೀತಿ ಗುಣ ಇತ್ಯಾದಿಗಳಿಂದ ಅತಿ ಉಚ್ಚಮಟ್ಟದ ಜೀವಿಯವರೆಗಿನ ಎಲ್ಲಾ ಜೀವಿಗಳು ಪ್ರಪಂಚದಲ್ಲಿ ಪರಸ್ಪರ ಸಂಬಂಧವನ್ನು ಹೊಂದಿವೆ ಎಂಬ ಮೂಲಭೂತ ಸರ್ವಾತ್ಮತ್ವಭಾವವೇ ಅಹಿಂಸೆಯ ಹಿಂದಿನ ತತ್ವ. ಅಗ್ನಿಪುರಾಣ ಹತ್ತು ವಿಧವಾದ ಹಿಂಸೆಗಳನ್ನು ಹೇಳುತ್ತದೆ. ಅದರಲ್ಲಿ ಚಾಡಿ ಹೇಳುವುದು, ವಿಶ್ವಾಸಘಾತುಕತೆ ಅನ್ಯರಿಗೆ ಕೇಡು ಬಗೆಯುವುದೂ ಸೇರುತ್ತವೆ. ಇಂತಹ ಕಾರ್ಯ ಮಾಡಿದವನು ಹೊಂದುವ ಪಾಪವನ್ನೂ ನರಕವನ್ನೂ ತಿಳಿಸಿ ಮುಂದೆ ಅವನು ವಿಕೃತ ಜೀವಿಯಾಗಿ ಜನ್ಮತಳೆಯುವನು ಎಂದು ಹೇಳುತ್ತದೆ. ಯಾರು ಅಹಿಂಸಾ ತತ್ತ್ವವನ್ನು ಪಾಲಿಸುತ್ತಾನೋ ಅವನು ದೇವತ್ವವನ್ನು ಹೊಂದುತ್ತಾನೆ ದೇವರನ್ನು ಪ್ರಸನ್ನಗೊಳಿಸುತ್ತಾನೆ ಎನ್ನುತ್ತದೆ ಅದು.

ದಯೆ ಮುಂತಾದ ಸದ್ಗುಣಗಳ ಅನುಷ್ಠಾನ, ಕಾಮ ಕ್ರೋಧಾದಿ ದುರ್ಗುಣಗಳ ತ್ಯಾಗವೇ ಅಹಿಂಸೆ. ಹಾಗಾಗಿ ಇದಕ್ಕೆ ಇಂದ್ರಿಯ ನಿಗ್ರಹ ಅನಿವಾರ್ಯ. ಸೃಷ್ಟಿಯಾದ ಎಲ್ಲದರಲ್ಲಿ ನೆಲೆಸಿರುವ ಪರಮಾತ್ಮನ ಅರಿವು ಈ ನೀತಿಯ ನೆಲೆ. ಇದು ದುಃಖದ ಛಾಯೆಯೇ ಇಲ್ಲದ ಅತ್ಯುನ್ನತವಾದ ಆನಂದದ ಸ್ಥಿತಿಗೆ ಮಾನವನನ್ನು ಒಯ್ಯುತ್ತದೆ.

### ಸತ್ಯ

ಇದು ಪರಮಧರ್ಮ. ಪ್ರಪಂಚ ಈ ಸತ್ಯದ ಆಧಾರದ ಮೇಲೆಯೇ ನಿಂತಿದೆಯೆಂದು – 'ಸತ್ಯೇನೋತ್ತಭಿತಾ ಭೂಮಿಃ ಸೂರ್ಯೇಣೋತ್ತಭಿತಾ ದ್ಯೌಃ' *(ಯಜುರ್ವೇದ, ೧.೬೧.೧)* ವೇದಗಳೂ ಸಾರುತ್ತವೆ. ಇದು ಪುರುಷಾರ್ಥಗಳ ಮೂಲ, ಸುಖ ಮತ್ತು ಆನಂದದ ಮೂಲ ನೆಲೆ. ವಿಷ್ಣುಪುರಾಣ ಅಗ್ನಿಪುರಾಣ ಮೊದಲಾದ ಅನೇಕ ಪುರಾಣಗಳು ಜೀವಿಗೆ ಪ್ರಿಯವಾಗುವುದೆಂದು ಸುಳ್ಳಾಡುವುದನ್ನು ಖಂಡಿಸುತ್ತವೆ ಪ್ರಿಯವಾದರೂ ಮಿಥ್ಯವನ್ನು ತೊರೆಯಲೇಬೇಕು. ಇದು ಶಾಶ್ವತ ನಿಯಮ ಎನ್ನುತ್ತದೆ. **ಯದ್ಭೂತಹಿತಮತ್ಯಂತಂ ತತ್ಸತ್ಯಂ** ಎಂದು ಸಾಧಾರಣವಾಗಿ ಎಲ್ಲಾ ಪುರಾಣಗಳೂ ಸತ್ಯಕ್ಕೆ ಸಮಾನವಾದ ಲಕ್ಷಣವನ್ನೇ ಹೇಳಿವೆ. ಸೃಷ್ಟಿಯಾದ ಸಕಲಜೀವಿಗಳಿಗೆ ಯಾವುದು ಅತ್ಯಂತ ಹಿತವಾದುದೋ ಅದು ಸತ್ಯ. ಇಲ್ಲಿ ಪ್ರಯೋಗವಾಗಿರುವ 'ಹಿತ' ಎಂಬ ಪದವನ್ನು ಗಮನದಲ್ಲಿಡಬೇಕು. ಜೀವಿಗಳಿಗೆ ಇಷ್ಟವಾಗುವುದೆಲ್ಲಾ ಹಿತವೇ ಆಗಿರುವುದೆಂದು ಹೇಳಲು ಬರುವುದಿಲ್ಲ. ಆದುದರಿಂದ ಈ ಲೋಕ ಮತ್ತು ಪರಲೋಕಗಳಲ್ಲಿ ಜೀವಿಯ ಜೀವಿಕೆಗೆ ಯಾವುದು ಹಿತವನ್ನು ಅದರಲ್ಲೂ ಅತ್ಯಂತ ಹಿತವನ್ನು ಉಂಟುಮಾಡುವುದೋ ಅದು ಸತ್ಯ. ಸತ್ಯ ಸಮಗ್ರ ಸಮಾಜದ ಕಲ್ಯಾಣ ಸಾಧಿಸುವಲ್ಲಿ ಮತ್ತು ಜೀವಿಜೀವಿಗಳ ನಡುವೆ ಮಧುರಬಾಂಧವ್ಯ ಉಂಟು ಮಾಡುವಲ್ಲಿ ಅತ್ಯಂತ ಸಹಕಾರಿ. ಇದು ವ್ಯಕ್ತಿಗಳನ್ನು ಪ್ರೇಮದ ಏಕಸೂತ್ರದಿಂದ ಬಂಧಿಸುತ್ತದೆ ಎಂದು ಪುರಾಣಗಳು ಪ್ರತಿಪಾದಿಸುತ್ತವೆ. ಆದುದರಿಂದ ಸತ್ಯ ಒಂದು ಸಾಮಾಜಿಕ ಗುಣ.

### ದಾನ

ಇದೂ ಸಮಾಜ ಹಿತವನ್ನು ಸಾಧಿಸುವ ಗುಣವಾದರೂ ಇದು ಪ್ರತಿಯೊಬ್ಬ ಪ್ರಜೆಯ ಸಾಮಾಜಿಕ ಕರ್ತವ್ಯ ಎನ್ನುತ್ತವೆ ಪುರಾಣಗಳು. ಇದರಲ್ಲಿ ಕೊಟ್ಟವನು ಪಡೆದವನು ಇಬ್ಬರೂ ಪ್ರಯೋಜನ ಹೊಂದುತ್ತಾರೆ. **ಆಪನ್ನಾರ್ತಿಪ್ರಶಮನಫಲಾ ಹಿ ಸಂಪದಃ** ಎಂಬಂತೆ ತೊಂದರೆಯಲ್ಲಿರುವವನ ತೊಂದರೆಯನ್ನು ಪರಿಹರಿಸುವುದೇ ಸಂಪತ್ತಿನ್ನ ಪರಮ ಪ್ರಯೋಜನ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡೇ ವ್ಯಕ್ತಿಯು ಆಚರಿಸುವ ಹಬ್ಬ ಹರಿದಿನ ವ್ರತ ಶ್ರಾದ್ಧ ಮೊದಲಾದ ನಿತ್ಯ ನೈಮಿತ್ತಿಕ ಕ್ರಿಯೆಗಳ ಅಂಗವಾಗಿ ದಾನವನ್ನು ಎಲ್ಲಾ ಪುರಾಣಗಳು ವಿಧಿಸುತ್ತವೆ. ಈ




ಮೂಲಕ ತಮ್ಮ ಸಂಪತ್ತನ್ನು ಹಂಚಲು ಅವಕಾಶ ಮಾಡಿಕೊಟ್ಟು ಸಮಾಜದಲ್ಲಿ ತೃಪ್ತಿ ಸಾಮರಸ್ಯಗಳನ್ನುಂಟು ಮಾಡಲು ಪುರಾಣಗಳು ಪ್ರಯತ್ನಿಸುತ್ತವೆ. ಈ ದಾನಗಳು ನಾಲ್ಕು ಬಗೆಯಾಗಿವೆ.

೧. ಪ್ರತಿಫಲಾಪೇಕ್ಷೆಯಿಲ್ಲದೆ ಕೇವಲ ಕರ್ತವ್ಯಭಾವದಿಂದ

ಸತ್ಪಾತ್ರರಲ್ಲಿ ಪ್ರತಿದಿನ ಅರ್ಪಿಸುವ ದಾನ ೨) ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾಗಿ, ಅಥವಾ ಗ್ರಹದಶಾಭುಕ್ತಿಗಳ ಕಾರಣ ಉಂಟಾಗಿರುವ ಗ್ರಹದೋಷ ನಿವಾರಣೆಗಾಗಿ, (ಇದೇ ಮೊದಲಾದ ನಿಮಿತ್ತ ಕಾರಣಗಳಿಗಾಗಿ) ಮಾಡುವ ನೈಮಿತ್ತಿಕ ದಾನ ೩) ಐಶ್ವರ್ಯ ಸಂತಾನ ಮುಂತಾದ ಭೌತಿಕ ಸಂಪತ್ತು ಪಡೆಯಲು ಸೂರ್ಯಗ್ರಹಣ ಚಂದ್ರಗ್ರಹಣ ಮೊದಲಾದ ಪವಿತ್ರಕಾಲದಲ್ಲಿ ಪುಣ್ಯಫಲ ಸಂಗ್ರಹಣೆಗಾಗಿ ಮಾಡುವ ಕಾಮ್ಯದಾನ ೪) ಸರ್ವ ಸಮರ್ಪಣಭಾವದಿಂದ ಭಗವಂತನನ್ನು ತೃಪ್ತಿಪಡಿಸಲು ಅವನಿಗೆ ನಿವೇದಿಸುವಂತೆ ಯುಕ್ತರಾದ ಜ್ಞಾನಿಗಳಿಗೆ ಅರ್ಪಿಸುವ ವಿಮಲಾ ದಾನ, ಇದು ದಾನಗಳಲ್ಲಿ ಪರಮಶ್ರೇಷ್ಠದಾನ.

ವಿಶಾಲಾರ್ಥದಲ್ಲಿ ಬಾವಿ ತೋಡಿಸುವುದು, ಕೆರೆಕಟ್ಟಿಸುವುದು, ಕಾಲುವೆ ತೋಡಿಸುವುದು, ಉದ್ಯಾನವನ ನಿರ್ಮಿಸುವುದು ಆಸ್ಪತ್ರೆ ದೇವಸ್ಥಾನ ಮೊದಲಾದ ಲೋಕೋಪಕಾರಿಯಾದವುಗಳನ್ನು ನಿರ್ಮಿಸುವುದು ಎಲ್ಲವೂ 'ಪೂರ್ತ'ರೂಪ ದಾನದೊಳಗೆ ಸೇರುತ್ತವೆ. ದಾನವು ಸಮಾಜದಲ್ಲಿ ಆರ್ಥಿಕ ಸಾಮರಸ್ಯ, ಶಾಂತಿ-ಸೌಹಾರ್ದಗಳು ನೆಲೆಸುವಂತೆ ಮಾಡಲು ಸಹಕರಿಸುತ್ತದೆ ಎಂದು ಪುರಾಣಗಳು ದಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತವೆ. ಈ ದಾನದ ಹಿನ್ನೆಲೆಯಲ್ಲೇ ಅವು ಅನೇಕ ವ್ರತ ಮತ್ತು ಹಬ್ಬಗಳ ಪ್ರಸ್ತಾವವನ್ನು ಮಾಡುತ್ತವೆ.

### ವ್ರತಗಳು ಮತ್ತು ಹಬ್ಬಗಳು

ಮೇಲೆ ಹೇಳಿದ ನಾಲ್ಕು ದಾನಗಳಲ್ಲಿ ಕಾಮ್ಯದಾನದ ಬಗೆಯಲ್ಲಿ ಈ ವ್ರತ ಮತ್ತು ಹಬ್ಬಗಳು ಸೇರುತ್ತವೆ. ಸಂಸಾರಿಯಾದವನು ಬಡತನದ ಬೇಗೆಯಿಂದ ಬಳಲುವುದು, ಸಂತಾನ ಭಾಗ್ಯವಿಲ್ಲದೆ ಕೊರಗುವುದು, ವಾಸಿಯಾಗದ ರೋಗಗಳಿಂದ ಬಳಲುವುದು, ಅಂಗಹೀನ, ವಿಕಲಾಂಗ ಬುದ್ಧಿಮಾಂದ್ಯ ಸಂತಾನ ಇತ್ಯಾದಿ ಅನೇಕ ಬಾಧೆಗಳಿಂದ ಪೀಡಿತನಾಗುವನು. ಪುರಾಣಗಳು ಇಂತಹ ಎಲ್ಲಾ ಸಮಸ್ಯೆಗಳಿಗೂ ಬೇರೆ ಬೇರೆ ರೀತಿಯ ಪರಿಹಾರಗಳನ್ನು ಹೇಳುವುವು. ಯಾರು ಯಾರಿಗೆ ಯಾವ ರೀತಿಯ ಬಾಧೆಯಿಂದ ಪರಿಹಾರ ಬೇಕಿದೆಯೋ ಅಂತಹುದನ್ನು ಆರಿಸಿಕೊಳ್ಳುವುದು ಇದು, ಆದುದರಿಂದ ಇದನ್ನು 'ವ್ರತ' ಎನ್ನುತ್ತಾರೆ. (ವೃ-ವರಣೇ=ಆಯ್ಕೆ ಮಾಡಿಕೋ ಎಂಬ ಧಾತುವಿನಿಂದ ಈ ಪದ ಬಂದಿದೆ) ಈ ಎಲ್ಲಾ ವ್ರತಗಳ ಅಂಗವಾಗಿಯೂ ಅವು ವಿವಿಧ ದಾನಗಳನ್ನು ವಿಧಿಸುತ್ತವೆ. ತಮ್ಮ ಶರೀರದ ತೂಕಕ್ಕೆ ಸಮನಾದ ವಸ್ತುವನ್ನು ದಾನ ಮಾಡುವ ತುಲಾಭಾರ, ಹಸುವಿನ ತೂಕದ ಅಥವಾ ಹಸುವಿನ ಆಕಾರವನ್ನು ರಚಿಸಲು ಬೇಕಾಗುವಷ್ಟು ಬೆಲ್ಲ ಗುಡಧೇನು ದಾನ, ಪರ್ವತ ಆಕಾರದಷ್ಟು ಧಾನ್ಯ ಮಾಡಿ ಧಾನ್ಯಪರ್ವತ ದಾನ, ಇತ್ಯಾದಿ ದಾನಗಳನ್ನು ಹೇಳುತ್ತವೆ. ಮೃತರ ಶಾಂತಿಗಾಗಿ ಹದಿನಾರು ವಿಧ ದಾನಗಳನ್ನು ಹೇಳುತ್ತವೆ. ಅವು ಪ್ರತಿ ಕುಟುಂಬಕ್ಕು ಸುಪರಿಚಿತವಾಗಿವೆ. ಕಣ್ಣಿನ ರೋಗಕ್ಕೆ ಘೃತದಾನ, ವಾಸಿಯಾಗದ ಹೊಟ್ಟೆನೋವಿಗೆ ಅನ್ನ



ದಾನ, ಸಕ್ಕರೆ ಕಾಯಿಲೆ (ಮಧುಮೇಹಕ್ಕೆ) ಸುವರ್ಣದಾನ ಹೀಗೆ ವಿವಿಧರೋಗಕ್ಕೆ ವಿವಿಧದಾನಗಳನ್ನು ಹೇಳುತ್ತವೆ. ಯಾನಶಯ್ಯೆಗಳನ್ನು ದಾನಮಾಡುವವನು ಐಶ್ವರ್ಯವನ್ನೂ, ಧಾನ್ಯವನ್ನು ಕೊಡುವವನು ಶಾಶ್ವತ ಸುಖವನ್ನೂ, ಹಸುವಿಗೆ ಹುಲ್ಲು ಕೊಡುವುದರಿಂದ ಸಕಲ ಪಾಪಗಳಿಂದ ಬಿಡುಗಡೆಯನ್ನೂ ವೇದಾದಿಜ್ಞಾನವನ್ನು ಕೊಡುವವನು ಶಾಶ್ವತ ಬ್ರಹ್ಮ ಲೋಕವನ್ನೂ ಹೊಂದುವನು ಎಂದು ವಿವಿಧ ಕಾಮನೆಗಳ ಹಿನ್ನೆಲೆ ಯಲ್ಲಿ ಮಾಡಬೇಕಾದ ವಿವಿಧ ವ್ರತ ತದಂಗ ದಾನಗಳನ್ನು ಪುರಾಣಗಳು ವಿಸ್ತಾರವಾಗಿ ಹೇಳುತ್ತವೆ.

### ವ್ರತ ಮತ್ತು ಹಬ್ಬಗಳ ವಿವಿಧ ಸಾಂಸ್ಕೃತಿಕ ಆಯಾಮಗಳು

ಪುರಾಣದ ಈ ಎಲ್ಲಾ ಮಾತುಗಳೂ ಅರ್ಥವಾದಗಳು. ಇಲ್ಲಿ ದಾನ ಮಾಡುವುದು ಮುಖ್ಯವಾದ ಅಂಶ. ಜನ್ಮಾಂತರದ ಕೆಟ್ಟ ಕರ್ಮಗಳು ರೋಗರುಜಿನಾದಿಗಳ ರೂಪದಲ್ಲಿ ಬಾಧಿಸುವುದರಿಂದ ಆ ಕೆಟ್ಟ ಕರ್ಮಗಳ ಪಾಪದಿಂದ ಹೊರಗೆ ಬರುವುದು ಈ ವ್ರತ ತದಂಗ ದಾನಗಳ ವೈಶಿಷ್ಟ್ಯವೇ ಹೊರತು, ದಾನಮಾತ್ರದಿಂದ ಎಲ್ಲಾ ದೊರಕಿಬಿಡುತ್ತದೆ ಎಂಬುದಲ್ಲ. ಶುದ್ಧವಾದ ಮನದಿಂದ 'ಇದಂ ನ ಮಮ' ಇದು ನನ್ನದಲ್ಲ ಎಂಬ ಭಾವದಿಂದ ದಾನ ಮಾಡುವುದರಿಂದ ಮನಸ್ಸು ಶುದ್ಧವಾಗುತ್ತದೆ. ಸುಖಕ್ಕಾಗಲಿ, ದುಃಖಕ್ಕಾಗಲೀ, ಬಂಧನಕ್ಕಾಗಲೀ ಬಿಡುಗಡೆಗಾಗಲೀ ಮನಸ್ಸೇ ಕಾರಣವಾದುದರಿಂದ ಮನಸ್ಸಿನ ನೈರ್ಮಲ್ಯ ನೇರವಾಗಿ ಅಲ್ಲದಿದ್ದರೂ ಪಾರಂಪರಿಕವಾಗಿ ರೋಗರುಜಿನಾದಿಗಳ ಪರಿಹಾರಕ್ಕೆ ಕಾರಣವಾಗುತ್ತದೆ. ತೋರ್ಪಡಿಕೆಗೆ, ಆಡಂಬರಕ್ಕೆ, ಶ್ರೀಮಂತಿಕೆಯ ಹಿರಿತನ ಮೆರೆಯುವುದಕ್ಕೆ ಈ ರೀತಿಯ ಬೇರೆ ಬೇರೆ ಹಿನ್ನೆಲೆಯಲ್ಲಿ ಮಾಡಿದ ದಾನಗಳು ಫಲಕಾರಿಯಾಗವು ಎಂಬ ಭಾಗವನ್ನು ಹೇಳಿ, ಪುರಾಣಗಳು ನಿರಪೇಕ್ಷ ಚಿತ್ತಶುದ್ಧ ಭಾವಕ್ಕೇ ಹೆಚ್ಚು ಪ್ರಾಶಸ್ತ್ಯ ನೀಡುತ್ತವೆ ಎಂಬುದು ಗಮನಾರ್ಹ.

ಈ ವ್ರತಗಳಲ್ಲಿ ತೀರ್ಥಯಾತ್ರೆಗಳು ತೀರ್ಥಸ್ನಾನಗಳೂ ತೀರ್ಥಕ್ಷೇತ್ರಗಳಲ್ಲಿ ಮಾಡುವ ದಾನಗಳೂ ಸೇರುತ್ತವೆ.

ಮಾನವರ ಪರಸ್ಪರ ಸೌಹಾರ್ದ ಬಾಂಧವ್ಯಗಳ ಬೆಸುಗೆಗೆ ಕಾರಣವಾದ ಹಬ್ಬಗಳು ವಿವಿಧ ಆಯಾಮಗಳನ್ನು ಹೊಂದಿವೆ. ಪ್ರಧಾನವಾಗಿ ಇವಕ್ಕೆ ಆಧ್ಯಾತ್ಮಿಕ ಅಂಶವೇ ಇರುವುದು. ಆದರೂ ವಿವಿಧ ಬಗೆಯ ಭಕ್ಷ್ಯಗಳ ತಯಾರಿಕೆ, ನಾನಾ ವಿಧ ರಂಗವಲ್ಲಿಗಳನ್ನಿಡುವ ಕಲೆ, ಹಾಡು, ಭಜನೆ, ಸ್ತೋತ್ರ ಈ ಎಲ್ಲವುಗಳ ಪರಸ್ಪರ ವಿನಿಮಯ ಇದೇ ಮೊದಲಾದ ಸಾಮಾಜಿಕ ಮುಖವೂ ಹಬ್ಬಗಳ ಆಚರಣೆಯಲ್ಲಿದೆ. ಇದು ಮಾನವರ ಕುಟುಂಬ ಪರಂಪರಾಗತ ಸಂಸ್ಕೃತಿಯ ಜೊತೆಗೆ ವ್ಯಕ್ತಿವ್ಯಕ್ತಿಗಳಲ್ಲಿರುವ ಕಲಾ ನೈಪುಣ್ಯಗಳ ಅಭಿವ್ಯಕ್ತಿಗೂ ಅವಕಾಶ ನೀಡುವುದಾಗಿದೆ.

ಈ ಹಬ್ಬಕ್ಕೆ ಇದೇ ಭಕ್ಷ್ಯ ಮಾಡಬೇಕು ಇಂತಿಷ್ಟು ದಾನ ಮಾಡಬೇಕು ಇತ್ಯಾದಿಯಾಗಿ ಪುರಾಣಗಳು ವಿಧಿಸುತ್ತವೆ, ಜೊತೆಗೆ ವ್ರತರೂಪ ಹಬ್ಬವಾದರೆ ಉದಾಗೆ ಸ್ವರ್ಣಗೌರಿ ವ್ರತ ಅನಂತ ಪದ್ಮನಾಭ ವ್ರತ ವರಮಹಾಲಕ್ಷ್ಮಿ ವ್ರತ ಅವುಗಳಿಗೆ ಸಂಬಂಧಿಸಿದ ಕಥೆಗಳನ್ನು ಅವು ತಿಳಿಸುತ್ತವೆ. ಈ ಕಾರಣದಿಂದ ಬುದ್ಧಿಜೀವಿಗಳನ್ನಿಸಿಕೊಂಡ ವಿವೇಕಶಾಲಿಗಳೆಂದು ತಮ್ಮನ್ನು ಭಾವಿಸಿ ಕೊಂಡ ಜನರ ಮನದಲ್ಲಿ ಪುರಾಣಗಳು ಹೀನ ಸ್ಥಾನವನ್ನು ಪಡೆದುಕೊಂಡಿವೆ. ಆದರೆ ಈ ವಿಧಿವಿಧಾನಗಳನ್ನು ಪಾಲಿಸುವ ಅವುಗಳು ಹೊಂದಿರುವ ಪರಮಧ್ಯೇಯವಾದ ಚಾರಿತ್ರ್ಯಶುದ್ಧಿಯ ಭಾಗವನ್ನು ನಿಸ್ವಾರ್ಥತೆಯನ್ನು ತ್ಯಾಗಶೀಲತೆಯನ್ನು ಗಮನಿಸಿ ಆ ಹಿನ್ನೆಲೆಯಲ್ಲಿ ಇವುಗಳನ್ನು ವ್ಯಾಖ್ಯಾನ ಮಾಡಿದಾಗ ಪುರಾಣಗಳ ಮಹಿಮೆ ಹಿರಿಮೆ ಹೃದಯಕ್ಕೆ ಅಪ್ಯಾಯಮಾನವಾಗ ದಿರದು. ಇವುಗಳನ್ನು ಆಚರಿಸದಿದ್ದಲ್ಲಿ ಇಂತಿಂತಹ ಪಾಪವುಂಟಾಗುವುದು ಎಂದು ಹೇಳುವಾಗಲೂ ಪಾಪ ಉದ್ದೇಶವಲ್ಲ, ಆಚರಣೆ ಮಾಡಬೇಕು ತನ್ಮೂಲಕ ಉತ್ತಮ ಪ್ರಜೆಯಾಗಬೇಕು ಎಂಬ ಅಂಶವೇ ಪ್ರಧಾನವಾದುದು.

### ಆಧ್ಯಾತ್ಮಿಕ ಭಾವ

ಭಾರತೀಯ ಪರಂಪರೆಯ ಜೀವನಾಡಿಯೇ ಆಧ್ಯಾತ್ಮ, ಭಗವಂತನ ದರ್ಶನ. ಅದಕ್ಕೆ ಸಂಬಂಧಿಸಿದಂತೆ ಪುರಾಣಗಳು ಎಲ್ಲಾ ದೇವದೇವತೆಗಳ ಸ್ತೋತ್ರವನ್ನೂ ಆಯಾ ದೇವತೆಗಳನ್ನು ಮೆಚ್ಚಿಸುವ ವ್ರತಗಳನ್ನೂ ಆಯಾ ದೇವತೆಗಳಿಗೆ ಸಂಬಂಧಿಸಿದ ಪವಿತ್ರ ತೀರ್ಥಕ್ಷೇತ್ರಗಳನ್ನು ವಿಸ್ತಾರವಾಗಿ ನಿರೂಪಿಸುತ್ತವೆ. ದೇವ ದೇವತೆಗಳ ಪೂಜಾವಿಧಿವಿಧಾನಗಳನ್ನು ಅವು ತಿಳಿಸುತ್ತವೆ. ಇವು ಗಳ ಪರಮ ಉದ್ದೇಶವೂ ಮಾನವನ ಅಂತರಂಗ ಬಹಿರಂಗಗಳ ಶುದ್ಧಿ. ಮನಸ್ಸಿನ ಕೊಳೆಗಳಾದ ಕಾಮಕ್ರೋಧಾದಿಗಳನ್ನು ಈ ವ್ರತ ಪೂಜೆ ಮೊದಲಾದ ನೆಪದಲ್ಲಿ ಮಾಡಬೇಕಾಗಿರುವ ಬ್ರಹ್ಮ ಚರ್ಯ, ಉಪವಾಸ, ಉಪ್ಪಿಲ್ಲದ ಊಟ ಇತ್ಯಾದಿ ಆಚರಣೆಯ ಮೂಲಕ ಶುದ್ಧಮಾಡಿಕೊಳ್ಳಬಹುದು. ಈ ಎಲ್ಲಾ ಆಚರಣೆಗಳು ಶಮ ದಮ ಮೊದಲಾದ ಸಾಧನೆಗಳ ಮತ್ತೊಂದು ರೂಪವೂ



ಆಗಿರುತ್ತವೆ. ಮಂತ್ರಪಠಣ ದೇವಪೂಜೆ, ಜಪಾದಿ ವಿಧಾನಗಳು ಅಂತರಂಗ ಶುದ್ಧಿಗೆ ಸಹಕಾರಿಗಳಾಗುತ್ತವೆ. ಪುರಾಣಗಳು ಭಗವಂತನ ಒಲುಮೆ ಪಡೆಯುವಲ್ಲಿ ಭಕ್ತಿಗೆ ವಿಶೇಷ ಪ್ರಾಮುಖ್ಯತೆ ನೀಡುತ್ತವೆ. ಹಾಗಾಗಿ ಅನೇಕ ಭಕ್ತರ ಜೀವನ ವಿಧಾನಗಳನ್ನೂ ಪುರಾಣಗಳು ನಮಗೆ ತಿಳಿಸುತ್ತವೆ.

### ದೈವವೈವಿಧ್ಯ

ವ್ಯಕ್ತಿವ್ಯಕ್ತಿಯ ವಿಭಿನ್ನ ಅಭಿರುಚಿಗಳನ್ನು ಗಮನಿಸಿ ಪುರಾಣಗಳು ಅದಕ್ಕನುಗುಣವಾದ ಶಿವ, ವಿಷ್ಣು, ಗಣೇಶ, ಸುಬ್ರಹ್ಮಣ್ಯ, ದುರ್ಗಾ, ಪಾರ್ವತಿ.. ಹೀಗೆ ವಿವಿಧ ದೇವತಾರಾಧನೆಯನ್ನು ಹೇಳುತ್ತವೆ, ಮತ್ತು ಯಾವುದೇ ದೇವತೆ ಮೇಲು, ಯಾವುದೋ ಕೀಳು ಎಂಬ ಭೇದಭಾವ ಮಾಡುವುದನ್ನು ಅವು ಸಂಪೂರ್ಣವಾಗಿ ವಿರೋಧಿಸುತ್ತವೆ. ಪರಿಶುದ್ಧವಾದ ಮನಸ್ಸಿನಿಂದ ಅನ್ಯರ ಅಭಿರುಚಿಗೆ ಹಾನಿಯಾಗದ ವ್ಯವಹಾರವನ್ನು ಮಾನವ ರೂಢಿಸಿಕೊಳ್ಳಬೇಕೆಂದು ಅವು ವಿಧಿಸುತ್ತವೆ. ಹಾಗೆ ಮಾಡಿದಲ್ಲಿ ಸ್ವರ್ಗವನ್ನೂ, ಮಾಡದಿದ್ದಲ್ಲಿ ಪಾಪವನ್ನು ಹೊಂದುವನೆಂದೂ ಅವು ಹೇಳುತ್ತದೆ. ಅದು ಕೇವಲ ವ್ಯಕ್ತಿಯ ಶುದ್ಧಗುಣ ಸಂಗ್ರಹಕ್ಕೆ ಮತ್ತು ಪರಿಸರ ಸಮಾಜದ ಹಿತಕ್ಕೆ, ಪಾಪಪುಣ್ಯ ಎಂಬ ಕುಗ್ಗಿ-ಹಿಗ್ಗುವ ಹಿನ್ನೆಲೆಗಲ್ಲ, ಎಂಬುದನ್ನೂ ಕೆಲವು ಪುರಾಣಗಳು ಎಚ್ಚರಿಸುತ್ತವೆ. ಭಕ್ತಿಪ್ರಪತ್ತಿ ಮೋಕ್ಷೋಪಾಯ ವಿಚಾರಗಳನ್ನು ಹೆಚ್ಚು ಕಡಿಮೆ ಎಲ್ಲಾ ಪುರಾಣಗಳೂ ಹೇಳುತ್ತವೆ. ಇವು ಎಲ್ಲವೂ ದೇವತಾದ್ವೈತದರ್ಶನವನ್ನು ಸರ್ವಮತ-ಸಮನ್ವಯವನ್ನೂ ಬೋಧಿಸುತ್ತವೆ.

### ರಥಗಳು

ಪುರಾಣಗಳು ದೇವಾಲಯ ನಿರ್ಮಾಣ ಕುರಿತು ವಿಶೇಷ ಮಾಹಿತಿಯನ್ನು ನೀಡುವುದಿಲ್ಲ. ಇಂದ್ರದ್ಯುಮ್ನನೆಂಬ ರಾಜನು ಪುರಿಕ್ಷೇತ್ರದ ಮೂರು ಪ್ರತಿಮೆಗಳನ್ನು ನಿರ್ಮಿಸಿದ ಬಗೆಯನ್ನು


ಬ್ರಹ್ಮಪುರಾಣವು ವಿಸ್ತಾರವಾಗಿ ವಿವರಿಸುತ್ತದೆ. ದೇವಾಲಯದಲ್ಲಿನ ಉತ್ಸವ ಮೂರ್ತಿಗಳನ್ನು ಲೋಕಾನುಗ್ರಹಕ್ಕಾಗಿ ಬೀದಿಗಳಲ್ಲಿ ಬಿಜಯಮಾಡಿಸಲಿಕ್ಕಾಗಿ ನಿರ್ಮಿಸುವ ರಥಗಳ ಕುರಿತು ವಿಶೇಷ ಮಾಹಿತಿ ಅವುಗಳಲ್ಲಿ ಲಭ್ಯವಿದೆ. ಬ್ರಹ್ಮವೈವರ್ತ ಪುರಾಣ ಗೋಕುಲರಥ, ದೇವೀರಥ, ನವಗ್ರಹರಥಗಳ ಬಗ್ಗೆ ವಿಶೇಷ ಮಾಹಿತಿ ನೀಡುತ್ತದೆ. ಬ್ರಹ್ಮಾಂಡ ಪುರಾಣ ಲಲಿತಾದೇವಿ ಭಂಡಾಸುರವಧೆಯ ಕಾಲದಲ್ಲಿ ಬಳಸಿದ ಕಿರಿಚಕ್ರರಥ, ಗೇಯ ಚಕ್ರರಥ... ಇವುಗಳ ವಿಸ್ತಾರ ವಿವರಣೆ ನೀಡುತ್ತವೆ. ಜೊತೆಗೆ ಇಲ್ಲಿ ನಕ್ಷತ್ರಗಳು ಗ್ರಹಗಳು ರಾಹು ಸೂರ್ಯ ಇವರ ರಥಗಳ ವಿಶೇಷ ಮಾಹಿತಿ ಲಭ್ಯವಿದೆ. ವಾಯುಪುರಾಣ ಇಂದ್ರನು ಯಯಾತಿಗೆ



ನೀಡಿದ ರಮಣೀಯವಾದ ದಿವ್ಯಸ್ವರ್ಣ ನಿರ್ಮಿತ ಸರ್ವೋತ್ತಮ ರಥದ ವಿವರಣೆಯನ್ನು ನೀಡುತ್ತದೆ. ಇದರ ಕುದುರೆಗಳು ಮನೋವೇಗದಲ್ಲಿ ಚಲಿಸುವ ಸಾಮರ್ಥ್ಯ ಪಡೆದಿದ್ದವು. ಯಯಾತಿಯಿಂದ ಮುಂದೆ ಪರೀಕ್ಷಿತನವರೆಗೆ ಆ ವಂಶದಲ್ಲಿ ಆಳಿದ ಎಲ್ಲಾ ರಾಜರ ಸೇವೆಯನ್ನೂ ಅದು ಮಾಡಿತು. ಆದರೆ ಗಣ್ಯರ ಶಾಪದಿಂದ ಪರೀಕ್ಷಿತನ ಕಾಲದಲ್ಲಿ ಅದು ಕಣ್ಮರೆಯಾಯಿತೆಂದು ತಿಳಿಸುತ್ತದೆ. ವಿಷ್ಣುಪುರಾಣ ಭಾಗವತ ಪುರಾಣ ಮುಂತಾದ ಇತರ ಪುರಾಣಗಳು ಬೇರೆ ಬೇರೆ ರೀತಿಯ ರಥಗಳ ಮಾಹಿತಿಯನ್ನು ನೀಡುತ್ತದೆ. ಆದರೆ ಈ ರಥಗಳ ಹಿನ್ನೆಲೆಯಲ್ಲಿ ಆಧ್ಯಾತ್ಮಿಕವಾದ ಭಾವವೇ ಮಿಡಿಯುತ್ತಿದೆ. ಈ ಶರೀರವನ್ನು ರಥವೆಂದೂ, ಇಂದ್ರಿಯಗಳನ್ನು ಕುದುರೆಗಳೆಂದೂ ವಿವರಿಸುವ ಕಠೋಪನಿಷತ್ತಿನ ತಾತ್ತ್ವಿಕ ಆಂಶವನ್ನೇ ಪುರಾಣಗಳು ಪ್ರತಿಪಾದಿಸುತ್ತವೆ.

### ಸಾಹಿತ್ಯ

ಪುರಾಣಗಳು ಅನಂತ ಕಥಾಕೋಶಗಳು. ಈ ಕಥೆಗಳ ಸಂವಿಧಾನ ಸಂಭಾಷಣೆ ಕಥನ ತಂತ್ರಗಳು ವೈವಿಧ್ಯಮಯವಾಗಿವೆ. ಇವು ಸಮಗ್ರ ಭಾರತದ ಸಾಹಿತ್ಯ ಸಂಗೀತ ನೃತ್ಯನಾಟ್ಯಚಿತ್ರ ಶಿಲ್ಪ ಜಾನಪದಾದಿ ಕಲೆಗಳಿಗೆ ನೀಡಿರುವ ಯೋಗದಾನ ಊಹಾತೀತವಾದುದು. ಈ ಕಥೆಗಳ ವಿಷಯಗಳನ್ನು ಬಳಸಿಕೊಂಡೇ ಕಾಳಿದಾಸ, ಮಾಘ, ಭಾರವಿ ಮೊದಲಾದ ಸಂಸ್ಕೃತ ಸಾಹಿತ್ಯ ಕ್ಷೇತ್ರದ ಧ್ರುವತಾರೆಗಳು ಕಾವ್ಯ ನಾಟಕಾದಿಗಳನ್ನು ರಚಿಸಿ ಸಂಸ್ಕೃತ ಸಾಹಿತ್ಯ ಕ್ಷೇತ್ರವನ್ನು ಸುಸಮೃದ್ಧಗೊಳಿಸಿದ್ದಾರೆ.



### ಉಪಸಂಹಾರ

ಹೀಗೆ ಸಾಮಾನ್ಯ ಸಾಮಾ ಜಿಕ ಜನಜೀವನದ ಜೀವನ ಕ್ರಮವನ್ನು ತಿದ್ದಿತೀಡಿ ನೇರ್ಪಡಿಸುವ ಕಾರಣವೇ ಅಸ್ತಿತ್ವಕ್ಕೆ ಬಂದಿರುವ ಪುರಾಣಗಳು ಭಾರತೀಯ ಸಂಸ್ಕೃತಿಯ ವಿಶ್ವಕೋಶ ಎಂದರೆ ಉತ್ಪ್ರೇಕ್ಷೆಯಾಗಲಾರದು. ಏಕೆಂದರೆ ಅವುಗಳು ಪ್ರತಿಪಾದಿಸುವ ವಿಷಯಗಳು ವ್ಯಾಪಕವಾಗಿವೆ. ಮಹಾಭಾರತಕ್ಕೆ ಅನ್ವಯವಾಗುವ — **'ಯದಿಹಾಸ್ತಿ ತದನ್ಯೇತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್'** ಇಲ್ಲಿರುವುದೇ ಬೇರೆಕಡೆಯಲ್ಲಿ ಸಿಗುವುದು ಯಾವುದು ಇಲ್ಲಿಲ್ಲವೋ ಅದು ಇನ್ನೆಲ್ಲೂ ಸಿಗಲಾರದು — ಎಂಬ ಮಾತು ಪುರಾಣಗಳಿಗೂ ಅನ್ವಯಿಸುತ್ತವೆ. ಅಧ್ಯಾತ್ಮದ ಉಸಿರು ಹಾಗೂ ಬೆನ್ನೆಲುಬಿನೊಡನೆ ಅವುಗಳು ನಿರೂಪಿಸಿರುವ ಭೌತಿಕ, ಬೌದ್ಧಿಕ, ದಾರ್ಶನಿಕ, ಆಧ್ಯಾತ್ಮಿಕ, ಸಾಮಾಜಿಕ, ರಾಜಕೀಯ, ಖಗೋಳ, ಭೂಗೋಳ, ಭಾರತವನ್ನಾಳಿದ ರಾಜರ, ರಾಜವಂಶಗಳ ವಿಷಯಗಳೇ ಇದಕ್ಕೆ ಸಾಕ್ಷಿ. ಇವು ಭಾರತೀಯ ಸಂಸ್ಕೃತಿಯೊಡನೆ ಬೆಸುಗೆ ಹಾಕಿಕೊಂಡಿವೆ. ಹಾಗಾಗಿ ಈ ಲೇಖನ

### ಸಂಸ್ಕೃತಿಯ ವರ

ಸಂಸ್ಕೃತಿಯು ಜೀವನಕ್ಷೇತ್ರವನ್ನೆಲ್ಲ ಒಂದೇ ಒಂದನ್ನಾಗಿ ಮಾಡಿ, ಒಂದೇ ಒಂದು ಅಖಂಡವಸ್ತುವನ್ನಾಗಿ ಕಾಣುತ್ತದೆ. ಸುಸಂಸ್ಕೃತಿ ಮನುಷ್ಯನು ತನ್ನ ಕ್ಷೇಮವನ್ನು ಊರಿನ ಕ್ಷೇಮದ ಒಂದು ಲವಾಂಶವನ್ನಾಗಿ–ಊರಿನ ಬಾಳನ್ನು ದೇಶ ಜೀವನದ ಒಂದು ಕಣಮಾತ್ರವಾಗಿ –ದೇಶಚರಿತ್ರೆಯನ್ನು ಮಾನವಲೋಕದ ಒಂದು ಸಣ್ಣ ಭಾಗವನ್ನಾಗಿ, – ಭೂಮಂಡಲವನ್ನು ವಿಶ್ವದ ಒಂದು ಅಂಗ ಮಾತ್ರವನ್ನಾಗಿ ಗಣಿಸಲು ಅಭ್ಯಾಸ ಮಾಡಿರುತ್ತಾನೆ. ತಾನು ಉಸಿರುವ ಉಸಿರನ್ನು ಆಕಾಶದ ಮೋಡಗಳಿಗೆ ಸಂಬಂಧ ಮಾಡಿ ನೋಡುತ್ತಾನೆ. ತನ್ನ ಮುಂದೆ ಆಡುತ್ತಿರುವ ಮಗುವಿನ ಕಣ್ಣನ್ನು ನಕ್ಷತ್ರದ ಒಡಹುಟ್ಟೆಂದು ಭಾವಿಸುತ್ತಾನೆ. ಇಂಥ ಭಾವವಿಶಾಲತೆಯು ಸಂಸ್ಕೃತಿಯಿಂದ ನಾವು ಪಡೆಯಬಹುದಾದ ವರ.

— ಡಿ.ವಿ.ಜಿ. (*'ಸಂಸ್ಕೃತಿ', ಪು. ೫೧*)